<u>ದಿನಾಂಕಃ 05.1.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.</u>

## ಪಾಟೀಸವಾಲುಃ 2 ರಿಂದ 6 ನೇ ಪ್ರತಿವಾದಿಪರ ವಕೀಲರಾದ ಶ್ರೀ ಬಿ.ಎಸ್.ವೈ ಅವರಿಂದ–

1. ನಾನು 7 ನೇ ಪ್ರತಿವಾದಿ ಪರ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ. ದಾವಾ ಸ್ವತ್ತಿನ ಸರ್ವೇ ನಂ.88/1 ಹಾಗೂ 85/1 ಆಗಿರುತ್ತದೆ. ನಾವು ಸದರಿ ದಾವಾ ಸ್ವತ್ತನ್ನು ಟಿ.ನಾರಾಯಣ ಸ್ವಾಮಿ ಹಾಗುಾ ಟಿ.ಕೃಷ್ಣರವರ ಜಿಪಿಎ ಓಲ್ಡರ್ ರಾಮಸ್ವಾಮಿ ಅವರಿಂದ ಖರೀದಿ ಮಾಡಿರುತ್ತೇವೆ. ನಿಡಿ.4 ಸದರಿ ಜಿಪಿಎ ಆಗಿರುತ್ತದೆ ಎಂದರೆ ಸರಿ.

2. ನಾವು ಸದರಿ ದಾವಾ ಸ್ವತ್ತನ್ನು ಖರೀದಿ ಮಾಡುವ ಮೊದಲು ನಾವು ದಾಖಲಾತಿಗಳನ್ನು ಪರಿಶೀಲನೆ ಮಾಡಿರುತ್ತೇವೆ. ಆ ಸಮಯ ನಾವು ಕಾನೂನು ತಜ್ಞರ ಸಲಹೆ ಪಡೆದಿರುತ್ತೇವೆ.

3. ವಾದಿಗೆ ಹಾಗೂ ದಾವಾ ಸ್ವತ್ತಿಗೆ ಯಾವುದೇ ಸಂಬಂಧ ಇಲ್ಲ. ಭದ್ರಿ ಪ್ರಸಾದ್ ಅವರಿಗೆ ಹಾಗೂ ದಾವಾ ಸ್ವತ್ತಿಗೆ ಯಾವುದೇ ಸಂಬಂಧ ಇರುವುದಿಲ್ಲ. ದಾವಾ ಸ್ವತ್ತಿನಲ್ಲಿ ನಾವೇ ಸ್ವಾಧೀನಾನುಭವದಲ್ಲಿದ್ದು ಹಾಗೂ ಮಾಲೀಕತ್ವ ಹೊಂದಿರುತ್ತೇವೆ. ಸದರಿ ದಾವಾ ಸ್ವತ್ತು ಸರ್ವೇ ನಂ.88/1 ವ್ಯವಸಾಯೇತರ ಜಮೀನು ಆಗಿರುತ್ತದೆ. ಇದಕ್ಕೆ ಸಂಬಂಧಪಟ್ಟಂತೆ ದಾಖಲಾತಿಗಳನ್ನು ಹಾಜರುಪಡಿಸುತ್ತೇನೆ. ಪ್ರಸ್ತುತ ದಾವಾ ಸ್ವತ್ತು 7 ನೇ ಪ್ರತಿವಾದಿ ದಿಯಾ ಎಂಟರ್ ಪ್ರೈಸಸ್ ಅವರ ಹೆಸರಿನಲ್ಲಿದೆ.

## ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಶಿರಿನ ಜಾವೀದ್ ಅನ್ಸಾರಿ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.